ನೋಂದಣಿ ಇಲಾಖೆಯ ಮಾರ್ಗಸೂಚಿ ಬೆಲೆಗೆ ಅನುಗುಣವಾಗಿ ಸೌಲಭ್ಯವನ್ನು ಒದಗಿಸಲಾಗುವುದು (ಶೇ. 50ರಷ್ಟು ಸಹಾಯಧನ ಮತ್ತು ಶೇ. 50ರಷ್ಟು ಅವಧಿ ಸಾಲ)

- ಮೈಕ್ರೊ ಕ್ರೆಡಿಟ್ ಯೋಜನೆ: ಈ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಹೊರಡಿಸಿರುವ ಮಾರ್ಗಸೂಚಿಯಂತೆ ಪ್ರತಿ ಫಲಾನುಭವಿಗೆ ರೂ. 25,000/- ಘಟಕ ವೆಚ್ಚದಂತೆ ಸೌಲಭ್ಯ ಒದಗಿಸಲಾಗುವುದು (ರೂ. 10,000/- ಸಹಾಯಧನ ಮತ್ತು ರೂ.15,000/- ಅವಧಿ ಸಾಲ)
- ಪರಿಶಿಷ್ಟ ಜಾತಿಯ ಉಪ ಯೋಜನೆಯಡಿ ವಿಶೇಷ ಕೇಂದ್ರೀಯ ನೆರವಿನಡಿ ನರ್ಸಿಂಗ್, ಎ.ಟಿ.ಡಿ.ಸಿ. ಜೆ.ಟಿ. ಮತ್ತು ಟಿ.ಸಿ. ನಿಫ್ಟ್, ಕೌಶಲ್ಯ, ಗಗನಸಖಿ ಮತ್ತು ಇತರೆ ತರಬೇತಿಗಳನ್ನು ನೀಡಲಾಗುತ್ತಿದೆ.
- ಪರಿಶಿಷ್ಟ ಜಾತಿ ಕುಟುಂಬಗಳಿಗೆ ವಿವಿಧ ಕಾರ್ಯಕ್ರಮಗಳಡಿ ಸಹಾಯಧನ ಮತ್ತು ಕಾಲೋನಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು.
- ಆಗ್ಗಿಂದಾಗಿ ಸರ್ಕಾರದಿಂದ ಕರೆಯುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ತರಬೇತಿ ನೀಡಲಾಗುವುದು.
- ಅಂತರ್ಜಾತಿ ವಿವಾಹದವರಿಗೆ ರೂ. 50,000/- ಧನ ಸಹಾಯ ನೀಡಲಾಗುವುದು.
- ದೌರ್ಜನ್ಯಕ್ಕೆ ಒಳಪಟ್ಟ ಪರಿಶಿಷ್ಟ ಜಾತಿಯವರಿಗೆ ಪರಿಹಾರಧನ ನೀಡಲಾಗುವುದು.
- ಕಾನೂನು ಪದವೀದರರಿಗೆ ಮಾಹೆಯಾನ ರೂ. 1,000/- ದಂತೆ ಶಿಷ್ಯ ವೇತನ ನೀಡಲಾಗುವುದು.

ಹಜ್ ಭವನ ನಿಮಾಣ ಕುರಿತು

1178 ಶ್ರೀ ಹ್ಯಾರೀಸ್, (ಎಂಎಲ್ಎ) ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಹಜ್‌ಭವನ ನಿರ್ಮಾಣದ ಪ್ರಗತಿ ವಿವರಗಳೇನು;

ಆ) ಹಜ್ ಭವನಕ್ಕಾಗಿ ಮೀಸಲಿಟ್ಟ ಸ್ಥಳ ಹಾಗೂ ಅನುದಾನದ ವಿವರಗಳೇನು?

ಪ್ರೊ. ಡಾ: ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಬೆಂಗಳೂರು ಉತ್ತರ ತಾಲ್ಲೂಕು ಹೆಣ್ಣೂರು ಗ್ರಾಮದ ಸರ್ವೆ ನಂ.30ರಲ್ಲಿ ಹಜ್ ಘರ್ ನಿರ್ಮಾಣಕ್ಕಾಗಿ ಮಂಜೂರಾಗಿರುವ ಜಾಗವು ಸಾರ್ವಜನಿಕ ಉದ್ಯಾನವನಕ್ಕಾಗಿ ಮೀಸಲಾಗಿರುವುದಾಗಿ ಕರ್ನಾಟಕ ಹೈಕೋರ್ಟ್‌ನಲ್ಲಿ ಒಂದು ಪಿಐಎಲ್‌ನ್ನು ಅರ್ಕಾವತಿ ಲೇಔಟ್ ರೆಸಿಡೆಂಟ್ಸ್ ಅಸೋಸಿಯೇಷನ್‌ರವರು ದಾಖಲು ಮಾಡಿದ್ದು. ಇದು ಇನ್ನು ಬಾಕಿಯಿದೆ. ಆದುದರಿಂದ ಹಜ್‌ಘರ್ ನಿರ್ಮಾಣದ ಪ್ರಗತಿ ಕಾರ್ಯಗಳು ಪ್ರಾರಂಭವಾಗಿರುವುದಿಲ್ಲ.

ಆ) ಬೆಂಗಳೂರು ಉತ್ತರ ತಾಲ್ಲೂಕಿನ, ಹೆಣ್ಣೂರು ಗ್ರಾಮದ ಸರ್ವೆ ಸಂಖ್ಯೆ:30ರಲ್ಲಿಯ 5.00 ಎಕರೆ ಜಮೀನನ್ನು ಹಜ್‌ಘರ್ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರವು ಮಂಜೂರು ಮಾಡಿರುತ್ತದೆ.

ರಾಜ್ಯ ಸರ್ಕಾರವು ಸದರಿ ಜಾಗವನ್ನು ಖರೀದಿಸಲು ರೂ. 2.25 ಕೋಟಿ ಮತ್ತು ನೋಂದಣಿ ಮುದ್ರಾಂಕ ವೆಚ್ಚ ರೂ. 25.00 ಲಕ್ಷಗಳ ಪೈಕಿ ರೂ.12.50 ಲಕ್ಷಗಳನ್ನು ಮನ್ನಾ ಮಾಡಿದೆ. 2009–10ನೇ ಸಾಲಿನ ಆಯವ್ಯಯದಲ್ಲಿ ಹಜ್‌ಘರ್ ನಿರ್ಮಾಣಕ್ಕಾಗಿ ರೂ. 5.00 ಕೋಟಿಯನ್ನು ಒದಗಿಸಲಾಗಿದೆ.

ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳು

1177 ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳು ಯಾವುವು;

ಆ) ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಶುಲ್ಕ ಮತ್ತಿತರ ಅವಶ್ಯಕ ವೆಚ್ಚಗಳಿಗೆ ಆರ್ಥಿಕ ನೆರವನ್ನು ಒದಗಿಸಿ ಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು, 2007–08 ಮತ್ತು 2008–09ನೇ ಸಾಲಿನಲ್ಲಿ ಈ ಸಂಬಂಧವಾಗಿ ನೀಡಿದ ಆರ್ಥಿಕ ನೆರವಿನ ಮೊತ್ತ ವೆಷ್ಟು;

ಇ) ರಾಜ್ಯದಲ್ಲಿ ಒಟ್ಟು ಎಷ್ಟು ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ವ್ಯಾಸಂಗಕ್ಕಾಗಿ ಆರ್ಥಿಕ ನೆರವನ್ನು ನೀಡಲಾಗಿದೆ?